# ಭಾರತೀಯ ಸಾಮಗಾನ ಸಭಾ, ಬೆಂಗಳೂರು ಪ್ರಸ್ತುತಿ

**16ನೇ ಭಾರತೀಯ ಶಾಸ್ತ್ರೀಯ ಸಂಗಿತೋತ್ಸವ**

# ಭಾರತ್ ಗಂಧರ್ವ ಯಾತ್ರ

**19–23 ಫೆಬ್ರುವರಿ 2025 : ಚೌಡಯ್ಯ ಸ್ಮಾರಕ ಭವನ, ಬೆಂಗಳೂರು**

## ಪತ್ರಿಕಾ ಪ್ರಕಟಣೆ




ಭಾರತೀಯ ಶಾಸ್ತ್ರೀಯ ಸಂಗೀತಕ್ಕೆ ವಿಶೇಷವಾದ ಶಕ್ತಿಯಿದೆ. ಮನಸ್ಸು ಮತ್ತು ಸಂಸ್ಕೃತಿಯ ವಿಕಾಸಕ್ಕೆ ಮತ್ತು ಐಕ್ಯತೆಗೆ ಸಂಗೀತವೇ ಒಂದು ಮಹತ್ಸಾಧನ ಎಂಬ ಬಲವಾದ ನಂಬಿಕೆ ಭಾರತೀಯ ಸಾಮಗಾನ ಸಭೆಯದು. ನಮ್ಮ 16ನೆಯ ಸಂಗೀತೋತ್ಸವ "ಭಾರತ್ ಗಂಧರ್ವ ಯಾತ್ರಾ" ಎಂಬ ಶೀರ್ಷಿಕೆ ಹೊತ್ತಿದೆ. ಚೌಡಯ್ಯ ಸಭಾಂಗಣದಲ್ಲಿ ಆಯೋಜಿಸಲಾಗಿರುವ ಐದು ದಿನಗಳ ಈ ಒಂದು ಗಂಧರ್ವ ಯಾತ್ರೆಯಲ್ಲಿ ತಮ್ಮಂತಹ ರಸಿಕ ಬಂಧುಗಳು ಬಂದು ನಮ್ಮೊಡನಿದ್ದು ರಾಷ್ಟ್ರದ ಸಂಗೀತ ಹಬ್ಬಗಳಿಗೆಂದೇ ಅರ್ಪಿಸಲಾದ ಈ ಸಿರಿವಂತ ಉತ್ಸವದಲ್ಲಿ ಭಾಗಿಯಾಗಬೇಕೆಂದು ತುಂಬು ಪ್ರೀತಿಯಿಂದ ತಮ್ಮೆಲ್ಲರನ್ನು ಆಹ್ವಾನಿಸುತ್ತಿದ್ದೇವೆ.

ಇದೊಂದು ಕೇವಲ ಸಂಗೀತ ಕಾರ್ಯಕ್ರಮವಾಗಿರದೆ ಬದಲಿಗೆ ಒಂದು ವಿಶಿಷ್ಟಾನುಭವ ಪಡೆವ ಹಾಗೂ ಸಂಗೀತ ರಸಾನುಭುವದಲ್ಲಿ ತಮ್ಮನ್ನು ತಾವು ವಿಲೀನಗೊಳಿಸುವಂತಹ ಸುಸಂದರ್ಭ. ಹೀಗಾಗಿಯೇ ಇದೊಂದು ಅಪೂರ್ವ ಗಾಂಧರ್ವ ಯೋಗ. ನಮ್ಮ ದೇಶದ ರಾಷ್ಟ್ರ ಮಟ್ಟದ ವಿವಿಧ ಸಂಗೀತ ಉತ್ಸವಗಳ ಶ್ರೀಮಂತ ಜವನಿಕೆಯ ಅನಾವರಣದ ಸುಸಂದರ್ಭ. ಸಭಾ ಆಯೋಜಿಸಿರುವ ಭಾರತ ಗಂಧರ್ವ ಯಾತ್ರಾದಲ್ಲಿ ಮಿನುಗುವ ತಾರಾಲೋಕದ ಗಂಧರ್ವರು ಯಾರು ಎಂದರೆ ರಂಜನಿ ಗಾಯತ್ರಿ, ಸಂದೀಪ್‌ನಾರಾಯಣ, ತ್ರಿಚೂರು ಸಹೋದರರು, ಸಾಯಿ ವಿಘ್ನೇಶ್, ಆರ್ಯ ಅಂಬೇಕರ್ ಮತ್ತು ಲಕ್ಷ್ಮೀನಾಗರಾಜ್ ಹಾಗೂ ಇಂದೂ ನಾಗರಾಜ್ ಈ ಮಹಾನ್ ಕಲಾವಿದರುಗಳಲ್ಲದೆ ಅತ್ಯಂತ ಪ್ರತಿಭಾನ್ವಿತ ಯುವ ಕಲಾವಿದರ ತಂಡವೇ ಇದೆ. ಅವರುಗಳೆಂದರೆ ಸೂರ್ಯಗಾಯತ್ರಿ, ಬಾಲಪ್ರತಿಭೆ ಗಂಗಾ ಶಶಿಧರನ್, ಆರ್ಯಬನಿಕ್ ಅಲ್ಲದೆ ಮೈಸೂರು ಸುಮಂತ್ ಹಾಗೂ ಷಡಜ್ ಗೋಡ್ಕಿಂಡಿ. ಸಂಗೀತ ಪ್ರಪಂಚದ ತಾರಾ ಸಮೂಹವೇ ಚೌಡಯ್ಯ ಸಭಾಂಗಣದಲ್ಲಿ ಸಂಗಮಗೊಳ್ಳುತ್ತಿರುವ ಸುಸಮಯ.

**ಆರ್.ಆರ್. ರವಿಶಂಕರ್**
ಸಂಸ್ಥಾಪಕ ಅಧ್ಯಕ್ಷರು ಹಾಗೂ ಮ್ಯಾನೇಜಿಂಗ್ ಟ್ರಸ್ಟಿ
ಭಾರತೀಯ ಸಾಮಗಾನ ಸಭಾ
ಮೊ : 9845833033

**ಹೆಚ್.ವಿ. ಪ್ರಶಾಂತ್ ಕುಮಾರ್**
ಟ್ರಸ್ಟೀ ಹಾಗೂ ಗೌ॥ ಕಾರ್ಯದರ್ಶಿ
ಭಾರತೀಯ ಸಾಮಗಾನ ಸಭಾ
ಮೊ : 9449811972

ಇ-ಮೇಲ್ : bharatiyasamagana@yahoo.com

**website: bharatiyasamaganasabha.org**

## ಗಂಧರ್ವ ಸಂಗೀತ

ಸಂಗೀತ ಎನ್ನುವುದೇ ಗಂಧರ್ವ ವಿದ್ಯೆ. ಗಂಧರ್ವರಿಂದಲೇ ಗಾನ ಎಂಬುದು ಪರಂಪರೆಯ ನಂಬಿಕೆ. ನಾದದಿಂದ ದೈವವನ್ನು ಒಲಿಸುವ ವಿದ್ಯೆಯೇ ಗಂಧರ್ವ ವಿದ್ಯೆ. ಇದರ ಪರಿಣತಿ ಹೊಂದಿರುವವನೇ ಗಾಂಧರ್ವ ಎನಿಸಿಕೊಳ್ಳುತ್ತಾನೆ. ಗಂಧರ್ವದ ಸೌಂದರ್ಯ ಇರುವುದೇ ನಾದ ಸುಖದಲ್ಲಿ ಭಾಷೆ ಮತ್ತು ಲಯದಲ್ಲಿ. ಇದೊಂದು ಸ್ವರ ಸಂಗಮ. ಈ ಇಡೀ ಕಾರ್ಯಕ್ರಮದ ವಿಶೇಷವೆಂದರೆ ಎಲ್ಲ ಉತ್ಸವಗಳ ಜವನಿಕೆಯನ್ನು ನುಣುಪಾಗಿ ನೇಯ್ದು ಅದರ ಸೊಬಗನ್ನು ರಸಿಕರ ಕಣ್ಮನಗಳಿಗೆ ಸ್ವರ ಮಾಧುರ್ಯದ ಸಂವಹನದಿಂದ ಸಂತುಷ್ಟಗೊಳಿಸುವುದೇ ಸಭಾದ ಆಶಯ. ಹೀಗಾಗಿಯೇ ಈ ಉತ್ಸವ ರಾಷ್ಟ್ರದ ಉನ್ನತ ಮಟ್ಟದ ಸಂಗೀತ ಉತ್ಸವಗಳಿಗೆ ಸಮರ್ಪಿಸಿರುವುದು.

### ಈ ಸಮರ್ಪಣೆಯಲ್ಲಿ ಕಾಣಬರುವ ಖ್ಯಾತ ಸಂಗೀತ ಸಂಸ್ಥೆಗಳು ಯಾವುವೆಂದರೆ

1. ತಿರುವೈಯಾರ್ ತ್ಯಾಗರಾಜರ ಆರಾಧನಾ ಮಹೋತ್ಸವ.
2. ಚನ್ನೈನ ಮಾರ್ಗಳಿ ಉತ್ಸವ
3. ಮೈಸೂರು ದಸರಾ ದರ್ಬಾರು
4. ಜಲಂಧರ್ ಹರಿವಲ್ಲಭ್ ಸಂಗೀತ ಸಮ್ಮೇಳನ
5. ತಿರುಮಲ ನಾದನೀರಾಜನಂ
6. ಗುರುವಾಯೂರ್ ಚಂಬೈ ಸಂಗೀತೋತ್ಸವ
7. ಸ್ವಾತಿ ಸಂಗೀತೋಲ್ಸವಂ
8. ಹಂಪಿ ಉತ್ಸವ
9. ಪಂಡರಾಪುರ್ ವಾರಿ
10. ಬೆಂಗಳೂರು ರಾಮೋತ್ಸವ
11. ಕಾಶಿ ಸಂಕಟ ಮೋಚನ ಸಂಗೀತ ಸಮಾರೋಹ್
12. ಸಾವಾಯ್ ಗಂಧರ್ವ ಭೀಮಸೇನ ಮಹೋತ್ಸವ
13. ಗ್ವಾಲೀಯರ್ ತಾನ್‌ಸೇರ್ ಸಮಾರೋಹ್

ನಮ್ಮ ಸಂಸ್ಕೃತಿಯ ಪರಂಪರೆ ಬಹುವಿಶಿಷ್ಟ ಮತ್ತು ವೈವಿಧ್ಯಮಯ. ಈ ನೆಲಮೂಲ ಸಂಸ್ಕೃತಿಯ ಸಂಪ್ರದಾಯ ತಳಹದಿಯೇ ಸ್ವರಮೇಳ ಹಾಗೂ ಸ್ವರಮೈತ್ರಿ ಅರ್ಥಾತ್ ಸಾಮರಸ್ಯ. ಸಂಗೀತದಿಂದ ಸಾಮರಸ್ಯ ಸಾಧ್ಯ. ಹೀಗಾಗಿಯೇ ದೇವಾನುದೇವತೆಗಳ ಪವಿತ್ರ ದೇವಾಲಯಗಳ ಸಾಧುಸಂತರ ಭಕ್ತಾಗ್ರೇಸರರ ಹೆಸರಿನಲ್ಲಿ ಇಂತಹ ಉತ್ಸವಗಳು ನಿರಂತರ ನಡೆಯುತ್ತಾ ಬಂದಿರುವುದು. ಅಂತೆಯೇ ನಮ್ಮ ಹಿಂದು ಸಂಪ್ರದಾಯಗಳು ಕೂಡ. ಹಬ್ಬಗಳು ಕೇವಲ ಹಬ್ಬಗಳಲ್ಲ, ಆಚರಣೆಗಳಲ್ಲ. ಆದರೆ ಈ ಆಚರಣೆಗಳ ಹಿಂದಿರುವ ಭಾರತೀಯ ಸಾಂಸ್ಕೃತಿಕ ಮೌಲ್ಯ ಇದೇ ನಮ್ಮ ಜೀವಾಳವೂ ಹೌದು. ಒಟ್ಟಾಗಿ ಸೇರುವುದು, ಆಲಿಸುವುದು ಸಂಗೀತದ ರಸಾಸ್ವಾದವನ್ನು ಅಪ್ಪುವುದು ತನ್ಮೂಲಕ ನಮ್ಮ ನಡುವಣ ಸಂಗೀತ ಕಲಾ ದಿಗ್ಗಜರನ್ನು, ಕಲಾ ಪೋಷಕರನ್ನು ಆದರದಿಂದ ಗೌರವಿಸುವುದು. ಕಲೆಯ ಕಾಣಿಕೆ ಎಂದರೆ ಇಂತವಲ್ಲದೇ ಬೇರೇನು?

## 13ನೇ ಸಾಮಗಾನ ಮಾತಂಗ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಸಮಾರಂಭ

ಇದೇ ವೇದಿಕೆಯಲ್ಲಿ ಭಾರತೀಯ ಸಾಮಗಾನ ಸಭಾ ಪ್ರತಿವರ್ಷ ಕೊಡಮಾಡುವ ರಾಷ್ಟ್ರಮಟ್ಟದ ಪ್ರತಿಷ್ಠಿತ 'ಸಾಮಗಾನ ಮಾತಂಗ' ಪುರಸ್ಕಾರವನ್ನು ದೇಶದ ಅತ್ಯುತ್ತಮ ವೇಣು ವಾದಕರಾಗಿರುವ ಶ್ರೀ ಶಶಾಂಕ್ ಸುಬ್ರಹ್ಮಣ್ಯಂ ಅವರಿಗೆ ದಿನಾಂಕ: 23–02–2025 ರಂದು ಸಂಜೆ 5.15 ನಿಮಿಷಕ್ಕೆ 'ಗಂಧರ್ವ ಸಂಗೀತ ಉತ್ಸವ' ಘೋಷಣೆಯೊಂದಿಗೆ ಗೌರವಿಸಲಾಗುವುದು. ಈ ಸನ್ಮಾನ ಸಮಾರಂಭದಲ್ಲಿ ಗೌರವಾನ್ವಿತ ಅತಿಥಿ–ಯಾಗಿ ಭಾಗಿಯಾಗುವವರು ಕರ್ನಾಟಕ ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿಗಳು ಹಾಗೂ ಎನ್.ಎ.ಬಿ.ಎಫ್.ಐ.ಎನ್.ಎಸ್. ಲಿಮಿಟೆಡ್ (ನಬಾರ್ಡ್‌ನ ಅಂಗಸಂಸ್ಥೆ)ಯ ಅಧ್ಯಕ್ಷರು ಆಗಿರುವ ಶ್ರೀ. ಎಸ್.ವಿ. ರಂಗನಾಥ್ ಅವರು, ಡಾ|| ಗಂಗೂಬಾಯಿ ಹಾನಗಲ್ ಮ್ಯೂಸಿಕ್ ಅಂಡ್ ಪರ್ಫಾರ್ಮಿಂಗ್ ಆರ್ಟ್ಸ್ ಯೂನಿವರ್ಸಿಟಿಯ ಉಪಕುಲಪತಿಗಳಾದ ಪ್ರೊ|| ನಾಗೇಶ್.ವಿ.ಬೆಟ್ಟಕೋಟೆ ಅವರು ಹಾಗೂ ಭಾರತೀಯ ವಿದ್ಯಾಭವನದ ನಿರ್ದೇಶಕರಾದ ಶ್ರೀ ಎಚ್.ಎನ್. ಸುರೇಶ್ ಅವರು.

**ವಂದನೆಗಳೊಂದಿಗೆ...**

### ಭಾರತೀಯ ಸಾಮಗಾನ ಸಭಾ ಪ್ರಸ್ತುತಿ

# ಭಾರತ್ ಗಂಧರ್ವ ಯಾತ್ರ

## 16ನೇ ಭಾರತೀಯ ಶಾಸ್ತ್ರೀಯ ಸಂಗೀತೋತ್ಸವ

**19-23, ಫೆಬ್ರುವರಿ 2025, ಚೌಡಯ್ಯ ಸ್ಮಾರಕ ಭವನ, ಬೆಂಗಳೂರು**

---

**ಫೆ-19 ಸಂಜೆ 4:30ಕ್ಕೆ**

## ಉದ್ಘಾಟನೆ

### ಭಾರತ್ ಗಂಧರ್ವ ಯಾತ್ರ

---

**ಫೆ-19 ಸಂಜೆ 5.00ಕ್ಕೆ**

ತಿರುವೈಯಾರು ತ್ಯಾಗರಾಜ ಆರಾಧನಾ

### ಗಂಗಾ ಶಶಿಧರನ್

ಪಿಟೀಲು, ಕರ್ನಾಟಕ ಸಂಗೀತ

**ಶ್ರೀರಾಗ್** – ಮೃದಂಗ

**ಟಿ. ಶ್ರೀ ಕುಮಾರ** – ತವಿಲ್

**ಮಂಜೂರ ಉನ್ನಿಕೃಷ್ಣನ್** – ಘಟ

---

**ಫೆ-19 ಸಂಜೆ 6.15ಕ್ಕೆ**

ಬೆಂಗಳೂರು ರಾಮೋತ್ಸವ

### ಲಕ್ಷ್ಮೀ ನಾಗರಾಜ್
### ಇಂದು ನಾಗರಾಜ್

ಯುಗಳ ಗಾಯನ, ಕರ್ನಾಟಕ ಸಂಗೀತ

**ಅಧಿತಿ ಕೃಷ್ಣಪ್ರಕಾಶ್** – ಪಿಟಿಲು

**ರಘು ಸಿಂಹ** – ಕೊಳಲು, **ಸುನೀಲ್ ಸುಬ್ರಹ್ಮಣ್ಯ** – ಮೃದಂಗ, **ಸುನಾದ ಅನೂರ್**– ಕಂಜಿರ

---

**ಫೆ-19 ಸಂಜೆ 7:30ಕ್ಕೆ**

ಹಂಪಿ ಉತ್ಸವ

### ಸಾಯಿ ವಿಘ್ನೇಶ್

ಸಮಕಾಲೀನ ಭಾರತೀಯ ಶಾಸ್ತ್ರೀಯ ಸಂಗೀತ ಗಾಯನ

**ಕೆ. ವೆಂಕಟಸುಬ್ರಹ್ಮಣ್ಯಂ** – ಪಿಟಿಲು

**ವಿ.ಜಿ. ವಿಘ್ನೇಶ್ವರ** – ಕೀ ಬೋರ್ಡ್

**ಸುರೇಶ್ ಕಾರ್ತಿಕ್**– ಮೃದಂಗ

**ಅಮೋಘ ವರ್ಷ**– ಡ್ರಮ್ಸ್

---

**ಫೆ-20 ಸಂಜೆ 5.15ಕ್ಕೆ**

ಮೈಸೂರು ದಸರಾ ದರ್ಬಾರ್

### ಮೈಸೂರು ಸುಮಂತ್ ಶಡಜ್ ಗೋಡಖಿಂಡಿ

ವಾದ್ಯ ಮೇಳ ಮತ್ತು ಭಾರತೀಯ ಶಾಸ್ತ್ರೀಯ ಸಂಗೀತ

**ಅದಮ್ಯಾ ರಮಾನಂದ** – ಮೃದಂಗ

**ರೂಪಕ್ ಕಲ್ಲೂಕರ್** – ತಬಲ

**ಶಮಿತಾ ಗೌಡ**– ಘಟ

---

**ಫೆ-20 ಸಂಜೆ 6.45ಕ್ಕೆ**

ಗುರುವಾಯೂರ್ – ಚೆಂಬೈ ಸಂಗೀತೊಲ್ಸವಂ
ಮತ್ತು ಸ್ವಾತಿ ಸಂಗೀತೊಲ್ಲವಂ

### ತ್ರಿಚೂರ್ ಸಹೋದರರು

ಯುಗಳ ಗಾಯನ, ಕರ್ನಾಟಕ ಸಂಗೀತ

**ಎಸ್. ಜನಾರ್ದನ** – ಪಿಟಿಲು

**ತ್ರಿಚೂರ ಆರ್. ಮೋಹನ** – ಮೃದಂಗ

**ಕೊವೈ ಸುರೇಶ**– ಘಟ

---

**ಫೆ-21 ಸಂಜೆ 5.15ಕ್ಕೆ**

ಕಾಶಿ ಸಂಕಟ ಮೋಚನ ಸಂಗೀತ ಸಮಾರೋಹ

### ಸೂರ್ಯಗಾಯತ್ರಿ

ಗಾಯನ , ಭಾರತೀಯ ಶಾಸ್ತ್ರೀಯ ಭಕ್ತಿ ಸಂಗೀತ

**ಆದರ್ಶ ಅಜಯಕುಮಾರ್** – ಪಿಟಿಲು

**ಪಿ.ವಿ. ಅನಿಲ್ ಕುಮಾರ್** – ಮೃದಂಗ

**ಪ್ರಶಾಂತ ಶಂಕರ**– ತಬಲ

**ಶೈಲೇಶ್ ಮಾರರ್**– ಹೆಚ್ಚುವರಿ ತಾಳವಾದ್ಯ

---

**ಫೆ-21 ಸಂಜೆ 6.45ಕ್ಕೆ**

ಪಂಢರಪುರ ವಾರಿ & ಸವಾಯಿ ಗಂಧರ್ವ
ಭೀಮಸೇನ್ ಮಹೋತ್ಸವ

### ಆರ್ಯ ಅಂಬೇಕರ್

ಗಾಯನ , ಭಾರತೀಯ ಶಾಸ್ತ್ರೀಯ ಭಕ್ತಿ ಸಂಗೀತ

**ಕಾತ್ರಿಕ್‌ಸ್ವಾಮಿ** – ತಬಲ, **ಮಹದೇವ**– ಹಾರ್ಮೋನಿಯಂ, **ಶುಭಂ**– ಪಖ್ವಾಜ್

**ಸೂರ್ಯಕಾಂತ**– ಸೈಡ್ ರಿದಮ್

---

**ಫೆ-22 ಸಂಜೆ 5.15ಕ್ಕೆ**

ಜಲಂಧರ್ ಹರಿವಲ್ಲಭ ಸಂಗೀತ ಸಮ್ಮೇಳನ &
ಗ್ವಾಲಿಯರ್ ತಾನ್‌ಸೇನ್ ಸಂಗೀತ ಸಮಾರೋಹ

### ಆರ್ಯ ಬನಿಕ್

ಗಾಯನ , ಹಿಂದುಸ್ಥಾನಿ ಸಂಗೀತ

**ಸತೀಶ್ ಕೊಳ್ಳಿ**– ಹಾರ್ಮೋನಿಯಂ

**ರೂಪಕ್ ಕಲ್ಲೂರ್ಕರ್**– ತಬಲ

---

**ಫೆ-22 ಸಂಜೆ 6.45ಕ್ಕೆ**

ತಿರುಮಲಾ ನಾದನೀರಾಜನಂ

### ಸಂದೀಪ್ ನಾರಾಯಣ್

ಗಾಯನ , ಕರ್ನಾಟಕ ಸಂಗೀತ

**ಎಚ್.ಎನ್. ಭಾಸ್ಕರ್** – ಪಿಟಿಲು

**ಸಾಯಿ ಗಂಧರ್ವ** – ಮೃದಂಗ

**ಗುರು ಪ್ರಸನ್ನ**– ಕಂಜಿರ

---

**ಫೆ-23 ಸಂಜೆ 5.00ಕ್ಕೆ**

### ಶಶಾಂಕ ಸುಬ್ರಮಣಿಯಂ

ಅವರಿಗೆ

### 13ನೇ ಸಾಮಗಾನ ಮಾತಂಗ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಸಮಾರಂಭ

---

**ಫೆ-22 ಸಂಜೆ 6.45ಕ್ಕೆ**

ಚೆನ್ನೈ ಮಾರ್ಗಳಿ

### ರಂಜನಿ ಗಾಯತ್ರಿ

ಯುಗಳ ಗಾಯನ , ಕರ್ನಾಟಕ ಸಂಗೀತ

**ಎಲ್ ರಾಮಕೃಷ್ಣನ್** – ಪಿಟಿಲು

**ದೆಹಲಿ ಸಾಯಿರಾಮ್** – ಮೃದಂಗ

**ಓಂಕಾರ್ ರಾವ್**– ಘಟ

---

**ಚೌಡಯ್ಯ ಸ್ಮಾರಕ ಭವನ, ಬೆಂಗಳೂರು**

**ಸಾರ್ವಜನಿಕರಿಗೆ: T ಸಾಲಿನಿಂದ ZZ ಸಾಲಿನವರೆಗೆ**

**ನಿಮ್ಮ ಆಸನ ಕಾಯ್ದಿರಿಸಲು bookmyshow**

# ಭಾರತ್
# ಗಂಧರ್ವ ಯಾತ್ರ
# 2025




**For soft copy
scan QR code**

## ಭಾರತೀಯ ಸಾಮಗಾನ ಸಭಾ

**ಆರ್. ಆರ್. ರವಿಶಂಕರ್**
ಸಂಸ್ಥಾಪಕ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ಟ್ರಸ್ಟಿ
Website : bharatiyasamaganasabha.org
**ಮೊ– 9845833033**
E-mail : bharatiyasamagana@yahoo.com